ಹೆಚ್ಚಾಗತೊಡಗಿತ್ತು. ಅಪ್ಪನ ದೇವ್ರನ ಉಳಿಸಿಕೊಳ್ಳಲು ಭಕ್ತಾದಿಗಳನ್ನು ಇನ್ನಷ್ಟು ವಿಶ್ವಾಸದಲ್ಲಿಟ್ಟುಕೊಳ್ಳಲು ಮುಂದಾದ. ಅಂಜುಗೆ ಏನಾದ್ರು ಹೇಳುತ್ತಲೆ ಆಕಿ ಭಾವನೆಗಳಿಗೆ ಧಕ್ಕೆ ಆಗದಂಗ ಸಮಾಧಾನ ಹೇಳಿ ಮುಂದೂಡುತ್ತಲೇ ಹೊಳಿಕಡೆ ಊರುಗಳಿಗೆ ಭೇಟಿಕೊಟ್ಟು ಅಪ್ಪನಂಗ ಮಂದಿ ಜತೆ ಇರಲು ಇಚ್ಛಿಸತೊಡಗಿದ. ಅಪ್ಪನಂತೆ ಮಾರುದ್ದ ಹಸ್ರು ರೂಮಾಲು ಸುತ್ತಿ, ಹೆಗಲಿಗೆ ಕೆಂಪು ಶಾಲು ತೊಟ್ಟು, ಕೈಲಿ ಬೆತ್ತ ಹಿಡಿದು, ಅಪ್ಪನಂಗ ಬೆಳ್ಳಿ ಕೈಕಡಗ. ಕಾಲುಕಡಗ ತೊಡಲು ಮುಂದಾದ. ನೀಟಾಗಿ ಗಡ್ಡ ಮೀಸಿ ಪ್ರತಿವಾರ ಬೋಳಿಸಿ, ಹಣೆಗೆ ಉದ್ದನೆ ತಿಲಕ ಧರಿಸಿ ಅಪ್ಪ ವಾರವಾರ ಕೂಡುತಿದ್ದ ಗದ್ದಿಗಿಮ್ಯಾಲ ಗಂಭೀರವಾಗಿ ಕೂಡತೊಡಗಿದ. ಬೀರ ಎಲ್ಲಿಕೂತ್ರು ‘ಹಾಯ್ ಮೀಸಿಬೋಳಾ..’ ಅಂತ ಅಂಜು ಪ್ರಾರಂಭಮಾಡಿ ‘ಬಾಯ್ ದೇವ್ರೆ..’ ಅಂತ ಚಾಟಿಂಗ್‌ಲ್ಲಿ ಎಲ್ಲಾ ಹೇಳಿ ಹಗುರಾಗತೊಡಗಿದ್ಲು.

ಊರುಮಂದಿ ಇಬ್ಬರ ಮಧ್ಯ ಆಗಿನಂಗ ಏನಿಲ್ಲಂತ ತಿಳಕೊಂಡಿದ್ರು. ಆದ್ರ ಬೀರ ಒಳಗೊಳಗ ಅಂಜುವಿನ ತುಂಬ ಹಚ್ಚಿಕೊಂಡು ಸಾಯುವರೆಗೂ ಕೈಬಿಡಬಾರದು ಅಂದುಕೊಂಡಿದ್ದ. ಆದ್ರ ಅಪ್ಪನ ದೇವ್ರು ಮತ್ತು ಪಟ್ಟಾ ಉಳಿಸಿಕೊಳ್ಳಲು ತುಂಬ ಎಚ್ಚರವಹಿಸಿಕೊಂಡು ಹೊಂಟಿದ್ದ. ತಮ್ಮಿಬ್ಬರ ಪ್ರೀತಿ ವಿಷಯ ಇಂಥ ಸಮಯದಾಗ ಗೊತ್ತಾದ್ರೆ ಗದ್ಲಕ ಕೆಡುತ್ತಾರೆಂದು ಗೊತ್ತಿತ್ತು. ಅದಕಂತಲೇ ಸುಮ್ಮನಾಗಿದ್ದ. ಇಲ್ಲಿ ರಶೀದಸಾಬುನೂ ಬೀರನ ಅಪ್ಪನಂಗ ತಾನೊಂದು ಗದ್ದಿಗೆ ನಿರ್ಮಿಸಿಕೊಂಡು ದಾನಪ್ಪನ ಹತ್ತಾರು ಭಕ್ತರನ್ನು ಸೇರಿಸಿಕೊಂಡು ದಾನಪ್ಪನ ದೇವ್ರಿಗೆ ಕೆಟ್ಟದಾಗಿ ಬಿಂಬಿಸುತ್ತ ಭಕ್ತರನ್ನು ಸೆಳೆದುಕೊಳ್ಳಲೂ ಮುಂದಾದ. ಈಗ ಊರಲ್ಲಿ ಎರಡು ಗದ್ದಿಗೆಗಳಲ್ಲಿ ದಾಸೋಹ ನಡೆಯತೊಡಗಿತು. ಒಂದಿನ ಏಕಾಏಕಿ ಕುಂಟುಮಾಳವ್ವ ಊರು ಅಗಸಿಕಟ್ಟಿಮ್ಯಾಲ ನಿಂತು ‘ಯಪ್ಪೊ ಯವ್ವೋ.. ಮಕ್ಳು ಆಗಿಲ್ಲಂತ ಬೀರಪ್ಪ ತಾತನ ಗದ್ದಿಗಿಗೆ ಹೋದ್ರ.. ತೊಡಿಬದಲ ಮಾಡಿದ್ರ ಮಕ್ಳು ಆಗ್ತಾವು. ಯಾರ್ ಸಿಗಲಿಲ್ಲಂದ್ರ ನಂತಾಕ ಬಾ.. ಅಂತಾನಲ್ಲಪ್ಪೋ.. ಅಪ್ಪನಂಗ ಛಲೋ ಅದ್ಯಾನಂಥ ಹೋದ್ರ ಹಿಂಗಾ ಹೇಳೋದು.. ಅಷ್ಟು ತೊಡಿ ತಿಂಡಿದ್ರ ಯಾವಾಕಿನಾದ್ರ ಮದ್ವಿ ಮಾಡ್ಕಬೇಕು. ಮದ್ವಿಯಾದಾಕಿನ ತೊಡಿ ಕೆಳ್ತಾರ.ಇವ್ರೆಂಥಾ ದೇವ್ರು ಹಿಡಿತಾರ. ಇವ್ರೆಂಥ ಹೇಳಿಕಿ ಹೇಳ್ತಾರ.. ತಿಂಡಿ ಸೂಳಿಮಕ್ಳು..’ ಅಂತ ಕುಂಟುಮಾಳವ್ವ ಎಗರಾಡಿದ್ಲು.

ನಿನ್ನೆರಾತ್ರಿ ರಶೀದಸಾಬು ಕುಂಟುಮಾಳವ್ವಗ ಹೊಳಿ ಹೆಂಡ ಕುಡಿಸಿ, ಹೇಳಿಕೊಟ್ಟಂಗನೇ ಹೇಳಿ ಪಂಚಾಯ್ತಿ ಕಟ್ಟಿಗೆ ಅಂಗಮಾಟ ಮಾಡಿದರಿಂದ ಈ ಸುದ್ದಿ ಊರುಮಂದಿಗಲ್ಲದೆ ಹೊಳಿಮಂದಿಗೂ ತಲುಪಿ ಬೀರನ ಅನುಮಾನದಿಂದ ನೋಡತೊಡಗಿದ್ರು. ಬೀರ ಬೆಂಕ್ಯಾಗಿ ‘ಅಪ್ಪಗ ಮೋಸಮಾಡಿ ಹೊಳಿಗೆ ನೂಕಿದಂಗ ಕುಂಟುಮಾಳವ್ವನ ನಡುವ ಇಟ್ಟುಕೊಂಡು ಹೆಸ್ರು ಕೆಡ್ಸಾಕ ಮುಂದಾಗ್ಯಾರ.. ಬಂಡ ಸೂಳಿಮಕ್ಳು ಈ ದೇವ್ರುಬ್ಯಾಡ.. ಈ ಊರು ಬ್ಯಾಡ.. ಎಲ್ಲಾದ್ರು ದೂರ ಹೋಗ್ತಿನಿ..’ ಅಂತ ಹೊಳಿದಂಡ್ಯಾಗ ಗವ್ವನೆ ಚಾಚಿದ್ದ ಜಾಲಿ ಪೊದ್ಯಾಗ ಸೇರಿಬಿಟ್ಟ.

ಅಲ್ಲೈಹಬ್ಬ ಬಂದೇಬಿಡ್ತು. ಬೀರ ಮನಿಬಿಟ್ಟು ವಾರವಾಗಿತ್ತು. ಊರುಮಂದಿ ಬೀರನ ಹುಡುಕಿದ್ರೂ ಸಿಗಲಿಲ್ಲ. ರಶೀದಸಾಬುನ ಕಡೇರು ಕಿರುಬೆಳ್ಳು ಮುಕ್ಕು ಆಗ್ಯೆತೆಂತ ಬೀರನಿಗೆ ದೇವ್ರು ಕೊಡಿಸೋ ಸುದ್ದಿನೂ ಎತ್ತಲಿಲ್ಲ. ಮುಲ್ಲಾಸಾಬಿ ಮಗ ಜಾಕೀರ್‌ಹುಸೇನಿಗೆ ಕೊಟ್ರಾಯ್ತೆಂದು ನಾಕು ಮಂದ್ಯಾಗ ದೇವ್ರು ಕೂಡಿಸುವಾಗ ಮಾತಾಡಿದಂತೆ ಜಾಕೀರ್‌ಹುಸೇನಿಗೆ ದೇವ್ರುಕೊಡಲು ಮುಂದಾಗಿದ್ರು. ‘ಯಾರಾದ್ರು ದೇವ್ರು ಹಿಡಿಲಿ ವರ್ಸದಂಗ ನಾವು ದಾನಪ್ಪನ ದೇವ್ರಿಗೆ ಹರಿಕಿಬ್ಯಾಟಿ ಮಾಡಿದ್ರಾಯ್ತು.. ಮನುಷ್ಯರತ್ರ ನಮ್ದೇನು ಅಯ್ತೆ.. ಏನಿದ್ರ ದೇವ್ರತ್ರ ಅಷ್ಟೇ ಇರೋದು.. ಯಾರನ ಏನಾದ್ರುಮಾಡ್ಲಿ.. ನಾವುಮಾತ್ರ ದೇವ್ರಿಗೆ ಹರಿಕಿಬ್ಯಾಟಿ ಮಾಡೋರಾ..’ ಅಂತ ಭಕ್ತರು ಗಟ್ಟಿನಿರ್ಧಾರ ಮಾಡಿಕೊಂಡು ದಾನಪ್ಪನ ದೇವ್ರಿಗೆ ಹೂದಟ್ಟಿ ಹಾಕಿ, ಕಂಚಿನ ತೊಟ್ಲಕಟ್ಟಿ ಸವಾರಿ ಮಾಡಲು ಮುಂದಾಗಿದ್ರು. ಇನ್ನೂ ಕೆಲವರು ‘ದಾನಪ್ಪ ಸತ್ತಮ್ಯಾಲ ಬೀರನಿಗೆ ದೇವ್ರು ಕೊಟ್ಟಿಲ್ಲ. ಅದೆಂಗ ಮುಲ್ಲಾಸಾಬಿ ಮಗನಿಗೆ ದೇವ್ರುಕೊಟ್ಟು ಸವಾರಿ ಮಾಡ್ತಾರ ನೋಡೇಬಿಡ್ತಿವಿ..’ ಅಂತ ಬೀರನ ಖಾಸ ದೋಸ್ತಿಗಳು ರಶೀದಸಾಬುನಮ್ಯಾಲ ಸಿಟ್ಟಿಟ್ಟು ಕಾಯುತ್ತಲೇ ಕೂತಿದ್ರು.

ಸವತ್ತು ಆಗಿತ್ತು. ಹಲಿಗಿ, ಬ್ಯಾಂಡುಬಾಜಿನೊಂದಿಗೆ ರಶೀದಸಾಬು ಜಾಕೀರ್‌ಹುಸೇನನನ್ನು ಮೆರವಣಿಗೆ